

## ನಕ್ಕುಬಿಡಿ




ಟೀಚರ್: ಲೋ ಗುಂಡಾ

ಗುಂಡ: ಏನ್ ಮೇಡಂ?

ಟೀಚರ್: ಆನೇ ದೊಡ್ಡದಾ? ಇರುವೆ ದೊಡ್ಡದಾ?

ಗುಂಡ: ಹಾಗೆಲ್ಲ ಹೇಳೋಕಾಗಲ್ಲ, ಡೇಟ್ ಆಫ್ ಬರ್ತ್ ಬೇಕು ಮೇಡಂ!

★★★

ಪತ್ನಿ: (ಫೋನಿನಲ್ಲಿ) ನೀವೆಲ್ಲಿದ್ದೀರಿ?

ಪತಿ: ಬ್ಯಾಂಕಿನಲ್ಲಿದ್ದೇನೆ.

ಪತ್ನಿ: ಸರಿ ಹಾಗಾದರೆ, ನನಗೆ ಹೊಸ ಮೊಬೈಲಿಗಾಗಿ 8000 ಮತ್ತು ಹೊಸ ಸೀರೆಗಾಗಿ 2000 ರೂಪಾಯಿ ತನ್ನಿ.

ಪತಿ: ನೀನು ತಪ್ಪೆಣಿಸಿರುವೆ, ನಾನು ಬ್ಲಡ್ ಬ್ಯಾಂಕಿನಲ್ಲಿದ್ದೇನೆ ಕಣೆ.

★★★

ಗುಂಡ: ಏನಯ್ಯಾ, ಈ ವಾಟ್ಸ್ಯಾಪ್ ಮತ್ತು ಫೇಸ್‌ಬುಕ್‌ಗಳಿಂದ ನೀನು ಹಣ ಗಳಿಸಲಿಚ್ಛಿಸುವೆಯಾ?

ಗೆಳೆಯ: ಹೌದು ಕಣೋ, ನಾನು ಅವೆರಡನ್ನೂ ಸದಾ ಬಳಸುತ್ತೇನೆ. ಹೇಗೆಂದು ಹೇಳಿ ಕೊಡೋ ಪ್ಲೀಸ್...

ಗುಂಡ: ಸರಿ ಹಾಗಾದರೆ, ಅವೆರಡನ್ನೂ ನಿನ್ನ ಮೊಬೈಲ್‌ನಿಂದ ಡಿಲೀಟ್ ಮಾಡಿ ನಿನ್ನ ದೈನಂದಿನ ಕೆಲಸ ಕಾರ್ಯಗಳಲ್ಲಿ ಪ್ರಾಮಾಣಿಕವಾಗಿ ತೊಡಗಿಕೊಳ್ಳು!

★★★

ಗುಂಡನಿಗೆ ತನ್ನ ಅಜ್ಜ ಕೊನೆಗಾಲದಲ್ಲಿ ಹೇಳಿದ್ದ ಆ ಒಂದು ವಾಕ್ಯವನ್ನು ಮರೆಯಲು ಸಾಧ್ಯವೇ ಆಗುತ್ತಿಲ್ಲ...

ನೀನು ಏಣಿಯನ್ನು ಗಟ್ಟಿಯಾಗಿ ಹಿಡಿದು ಕೊಂಡಿರುವೆ ತಾನೇ?

★★★

ಗುಂಡ ರಾಜಕೀಯ ಮುಖಂಡರೋರ್ವರ ಬಳಿ ತೆರಳಿ: 'ಸರ್, ನನಗೂ ಒಂದು ಕೆಲಸ ಕೊಡಿಸಿ' ಎಂದು ಕೇಳಿಕೊಂಡ.

ಮುಖಂಡ: ಸರಿ, ನೀನು ನನ್ನ ಸೆಕ್ರೆಟರಿಯಾಗಿ ಕಾರ್ಯನಿರ್ವಹಿಸು. ತಿಂಗಳಿಗೆ ಒಂದು ಲಕ್ಷ ರೂಪಾಯಿ ಸಂಬಳ ನೀಡುತ್ತೇನೆ.

ಗುಂಡ: ನನಗೆ ಅಷ್ಟು ದೊಡ್ಡ ಹುದ್ದೆ ಬೇಡ, ಯಾವುದಾದರೂ ಚಿಕ್ಕ ಕೆಲಸ ಕೊಡಿ ಸರ್.

ಮುಖಂಡ: ಹಾಗಾದರೆ ನನ್ನ ಪಾರ್ಟಿಯ ಮ್ಯಾನೇಜರ್ ಹುದ್ದೆ ಕೊಡುತ್ತೇನೆ. ತಿಂಗಳಿಗೆ ಎಪ್ಪತ್ತು ಸಾವಿರ ರೂಪಾಯಿ ಸಂಬಳ.

ಗುಂಡ: ಸರ್, ಇದು ಕೂಡಾ ತುಂಬಾ ದೊಡ್ಡದು. ನನಗೆ ಕೇವಲ ಹತ್ತಿಪ್ಪತ್ತು ಸಾವಿರ ರೂಪಾಯಿ ವೇತನದ ಉದ್ಯೋಗ ಕೊಡಿಸಿ.

ಮುಖಂಡ: ನಿನ್ನ ಅರ್ಹತೆಗೆ ಅಂಥಾ ಉದ್ಯೋಗ ಕೊಡಿಸುವುದು ಕಷ್ಟ ಕಣಯ್ಯಾ... ಅದಕ್ಕೆ ಒಳ್ಳೆಯ ವಿದ್ಯಾಭ್ಯಾಸ ಹಾಗೂ ಡಿಗ್ರಿಗಳ ಅವಶ್ಯಕತೆಯಿದೆ!

★★★

ಒಳ್ಳೆಯ ಕೆಲಸ ಮಾಡಿದವರಿಗೇ ಈ ಸಮಾಜವೇಕೆ ಶಿಕ್ಷೆ ವಿಧಿಸುತ್ತದೆಯೆಂದು ಚಾಲಕ ಗುಂಡನಿಗೆ ಅರ್ಥವಾಗುತ್ತಿಲ್ಲ...

ಒಮ್ಮೆ ಆತ ಬಸ್ಸಿನಲ್ಲಿ ಓರ್ವ ವೃದ್ಧೆಗೆ ತನ್ನ ಸೀಟು ಬಿಟ್ಟುಕೊಟ್ಟ. ತಕ್ಷಣ ಆ ಬಸ್ಸಿನ ಮಾಲೀಕ ಆತನನ್ನು ಚಾಲಕನ ಹುದ್ದೆಯಿಂದ ತೆಗೆದುಹಾಕಿದ!

**(ಸಂಗ್ರಹ) ರಮಣ್ ಶೆಟ್ಟಿ ರೆಂಜಾಳ್, ಮುಂಬೈ**

ವೈದ್ಯ: ಬೆಳಿಗ್ಗೆ ಏನ್ ತಿಂಡಿ ತಿಂದಿ?

ಹುಡುಗಿ: ಐ ಈಟ್ ಹಂಬರ್ಗ್, ಫ್ರೆಂಚ್ ಫ್ರೈಸ್

ವೈದ್ಯ: ಮತ್ತೇನ್ ತಿಂದಿ?

ಹುಡುಗಿ: ಕಾನ್ ಪಿಜ್ಜಾ ತಿಂದು, ಕೋಕ್ ಕುಡಿದೆ

ವೈದ್ಯ: ಇದು ಫೇಸ್‌ಬುಕ್ ಅಲ್ಲ, ಖರೇ ಹೇಳು ಏನ್ ತಿಂದೆ?

ಹುಡುಗಿ: ತಂಗಳ ರೊಟ್ಟಿ, ನಿನ್ನೀದು ಬದ್ನಿಕಾಯಿ ಪಲ್ಲೆ, ಖಾರಾ ಹಿಂಡಿ!

★★★



ಬಯಾಲಜಿ ಟೀಚರ್: ನಿನಗೆ ಪಕ್ಷಿಗಳ ಬಗ್ಗೆ ಪರಿಜ್ಞಾನವಿದೆಯೆ?

ಗುಂಡ: ಹೌದು ಟೀಚರ್.

ಬಯಾಲಜಿ ಟೀಚರ್: ಸರಿ ಹಾಗಾದರೆ ಹೇಳು, ಯಾವ ಪಕ್ಷಿ ಹಾರುವುದಿಲ್ಲ?

ಗುಂಡ: ಸತ್ತಿರುವ ಪಕ್ಷಿ.

★★★

ಅಪ್ಪ ಸೊಳ್ಳೆ: ದೊಡ್ಡವನಾದ ಮೇಲೆ ಏನಾಗಬೇಕು ಅಂತ ಅಂದ್ಕೊಂಡಿಯಾ?

ಮಗ ಸೊಳ್ಳೆ: ನಿನ್ನಂಗೆ ಪಪ್ಪ ಮಲೇರಿಯಾ ಸೊಳ್ಳೆ ಆಗ್ತೀನಿ.

ಅಪ್ಪ ಸೊಳ್ಳೆ: ಥೂ ನಿನ್ನ ಆ ಕಾಲ ಹೊಯ್ತು. ಈಗ ಡಂಗೆ ಅಥವಾ ಚಿಕೂನ್ ಗುನ್ಯ ಕೋರ್ಸ್ ಮಾಡು, ಸ್ಕೋಪ್ ಇದೆ!

**(ಸಂಗ್ರಹ) ಕುಬೇರಪ್ಪ. ಎಂ. ವಿಭೂತಿ, ಹರಿಹರ**

